**<u>ದಿನಾಂಕಃ 13.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು : ವಾದಿ ಪರ ಶ್ರೀ ಡಿ.ಟಿ.ಬಿ ವಕೀಲರಿಂದಃ</u>**

ನನ್ನ ಊರು ಬೈಲಗುಂಟಿ ಗ್ರಾಮ ಇರುತ್ತದೆ. ಪ್ರತಿವಾದಿ ನಂ. 1 ರಿಂದ 8 ರವರು ನಮ್ಮ ಊರಿನವರು ಇರುತ್ತಾರೆ. ವಾದಿ ಸಹ ನಮ್ಮ ಊರಿನವಳು ಇರುತ್ತಾಳೆ. ಇವರೆಲ್ಲರ ಪರಿಚಯ ನನಗೆ ಇದೆ. ವಾದಿಯ ತಂದೆ ಶರಣಪ್ಪನನ್ನು ನಾನು ನೋಡಿರುತ್ತೇನೆ. ವಾದಿಯ ತಂದೆ ಹೆಸರಿಲ್ಲಿ ಒಟ್ಟು 36 ಎಕ್ಕರೆ ಜಮೀನು ಇರುತ್ತದೆ. ವಾದಿಯ ತಂದೆ ಶರಣಪ್ಪ ತೀರಿಕೊಂಡು 7-8 ವರ್ಷಗಳು ಆಗಿರುತ್ತವೆ. ವಾದಿಯ ತಾಯಿ ಎಷ್ಟು ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಶರಣಪ್ಪ ತೀರಿಕೊಂಡ ನಂತರ ವಾದಿಯ ತಾಯಿ ತೀರಿಕೊಂಡಿರುತ್ತಾಳೆ ಎಂದರೆ ನಿಜ. ಎಲ್ಲ ಆಸ್ತಿಗಳು ಶರಣಪ್ಪನ ಹೆಸರಿನಲ್ಲಿ ಇದ್ದವು ಎಂದರೆ ನನಗೆ ಗೊತ್ತಿರುವುದಿಲ್ಲ. ಶರಣಪ್ಪ ತೀರಿಕೊಂಡ ನಂತರ ಎಲ್ಲಾ ಆಸ್ತಿಗಳು ವಾದಿಯ ತಾಯಿಯ ಹೆಸರಿನಲ್ಲಿ ದಾಖಲಾಗಿರುತ್ತವೆ ಎಂದರೆ ನಿಜ. ತಂದೆ ಶರಣಪ್ಪ ತೀರಿಕೊಂಡ ನಂತರ ಮನೆತನದ ಆಗುಹೋಗುಗಳನ್ನು ಅವಳ ತಾಯಿ ನೋಡಿಕೊಳ್ಳುತ್ತಿದ್ದಳು ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ನಂ. 1 ರಿಂದ 8 ರವರು ಯಾರು ಬೇರೆಯಾಗಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ವಾದಿಯ ತಾಯಿ ಜೀವಂತ ಇರುವಾಗಲೇ ಸರ್ವೆ ನಂ.62 ಕ್ಷೇತ್ರ 06 ಎಕ್ಕರೆ 25 ಗುಂಟೆ ಜಮೀನನ್ನು 4 ನೇ ಪ್ರತಿವಾದಿ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಸದರಿ ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ವಾದಿ, ಪ್ರತಿವಾದಿ ನಂ. 1 ರಿಂದ 8 ರವರ ಪೈಕಿ ಮೂರು ಜನರು ಅಂದರೆ ಬಸಮ್ಮ, ಪರಶುರಾಮ, ಬಸವಂತ್ರಾಯ ಅಂದರೆ ಪ್ರತಿವಾದಿ ನಂ. 1, 4 ಮತ್ತು 5 ರವರ ಸಹಿಗಳನ್ನು ಪಡೆದಿರುತ್ತೇನೆ. ನಾನು 1 ನೇ ಪ್ರತಿವಾದಿಯ ಸಹಿ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ಪ್ರತಿವಾದಿ ನಂ. 2, 3, 6, 7, 8 ಮತ್ತು ವಾದಿಯ ಸಹಿಗಳನ್ನು ಪಡೆದಿಲ್ಲ ಎಂದರೆ ಸಾಕ್ಷಿಯು ಅವರ

ಒಪ್ಪಿಗೆಯನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿಯವರಿಂದ ಒಪ್ಪಿಗೆ ಪತ್ರವನ್ನು ಪಡೆದಿರುವುದಿಲ್ಲ. ನಾನು ಮತ್ತು 4 ನೇ ಪ್ರತಿವಾದಿ ಸ್ನೇಹಿತರು ಇರುವುದರಿಂದ ಸದರಿ ಖರೀದಿ ಪತ್ರವನ್ನು ನಾನು ಮೋಸದಿಂದ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಇರುವುದರಿಂದ ಸದರಿ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು 4 ನೇ ಪ್ರತಿವಾದಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ವಾದಿ ಹಾಗೂ 1 ರಿಂದ 8 ನೇ ಪ್ರತಿವಾದಿಯರ ಭಾಗವನ್ನು ಎತ್ತಿಹಾಕುವ ಉದ್ದೇಶದಿಂದ ಸದರಿ ಖರೀದಿ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಎಲ್ಲ ವಾದಿ ಹಾಗೂ 1 ರಿಂದ 8 ನೇ ಪ್ರತಿವಾದಿಯರ ಮದುವೆಯನ್ನು ಅವರ ತಂದೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 4 ಜನ ಹೆಣ್ಣು ಮಕ್ಕಳ ಮದುವೆಯನ್ನು ಅವರ ತಂದೆ ಮಾಡಿರುತ್ತಾನೆ. ವಾದಿಯ ಮದುವೆಯನ್ನು 4 ನೇ ಪ್ರತಿವಾದಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯ ಮದುವೆಯನ್ನು ಆತನ ತಂದೆ ಮಾಡಿರುತ್ತಾನೆ. 8 ನೇ ಪ್ರತಿವಾದಿಯ ಮದುವೆಯನ್ನು 4 ನೇ ಪ್ರತಿವಾದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯ ಮದುವೆ 2015 ರಲ್ಲಿ ಅವರ ತಂದೆಯ ಜೀವಿತ ಕಾಲದಲ್ಲಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಸದರಿ ಜಮೀನಿನ್ನು ನನಗೆ ಒತ್ತಿ ಹಾಕಿದ್ದರು ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿಯ ಮದುವೆ 2016 ರಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಮತ್ತು 4 ನೇ ಪ್ರತಿವಾದಿ ಸೇರಿ ಯಾವುದೇ ಪ್ರತಿವಾದಿಯ ಸಹಿಯನ್ನು ಪಡೆಯದೇ ಕೊಟ್ಟಿ ಖರೀದಿ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ಸದರಿ ಜಮೀನುಗಳನ್ನು ಸಾಲದ ಸಲುವಾಗಿ ಬೇರೆಯವರಿಗೆ ಒತ್ತಿ ಹಾಕಿದ್ದನು. ಬೇರೆಯವರಿಗೆ ಒತ್ತಿ ಹಾಕಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನಿಗೆ ಯಾವುದೇ ಸಾಲ ಇರಲಿಲ್ಲ, ಒಳ್ಳೆ ಸ್ಥಿತಿಯಲ್ಲಿ ಇದ್ದನು ಒತ್ತಿ ಹಾಕುವ ಪ್ರಶ್ನೆ ಇರಲಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಕುಡಿಯತ್ತಿದ್ದನು, ಆತನಿಗೆ ಮೋಸ ಮಾಡಿ ಖರೀದಿ ಪತ್ರವನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.